# ಮೊದಲನೇ ಸಂಕಲನಾತ್ಮಕ ಮೌಲ್ಯಮಾಪನ (SA 1)

**ತರಗತಿ: 10ನೇ ತರಗತಿ** **ಅಂಕಗಳು: 80**

**ವಿಷಯ: ಸಮಾಜ ವಿಜ್ಞಾನ** **ಸಮಯ: 3 ಗಂಟೆ**

---

**I. ಈ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಿದ್ದು, ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ: 8x1=8**

1. ಮೊದಲನೇ ಆಂಗ್ಲೋ ಮರಾಠ ಯುದ್ಧದ ಬಳಿಕ ಪೇಶ್ವೆಯಾದವರು

   A) ನಾರಾಯಣರಾವ್ B) ನಾನಾ ಫಡ್ನವೀಸ್ C) 2ನೇ ಮಾದವರಾವ್ D) 2ನೇ ಬಾಜಿರಾಯ

2. ಬ್ರಿಟಿಷ್ ಶಿಕ್ಷಣದ ಪರಿಣಾಮವಾಗಿ ಜೆ.ಎಸ್.ಮಿಲ್, ರೂಸೋ, ಮಾಂಟೆಸ್ಕ್ಯೂ ಮುಂತಾದವರ ಚಿಂತನೆಗಳು ಭಾರತೀಯ ವಿದ್ಯಾವಂತರಲ್ಲಿ

   A) ಕ್ರಾಂತಿಕಾರಿ ಚಿಂತನೆಗಳನ್ನು ತಂದವು. B) ಪ್ರಾದೇಶಿಕವಾದವನ್ನು ಪ್ರಚೋಧಿಸಿದವು.

   C) ಉಗ್ರ ರಾಷ್ಟ್ರೀಯತೆಯನ್ನು ಬೆಳೆಸಿದವು. D) ಆಲೋಚನಾ ಕ್ರಮದಲ್ಲಿ ನಾವಿನ್ಯತೆ ತಂದವು.

3. 1962ರಲ್ಲಿ ಭಾರತ ಮತ್ತು ಚೀನಾ ಯುದ್ಧಕ್ಕೆ ಪ್ರಮುಖ ಕಾರಣವೆಂದರೆ

   A) ಗಡಿ ಸಮಸ್ಯೆ ಉಲ್ಬಣಗೊಂಡಿದ್ದು B) ಚೀನಾದಲ್ಲಿ ಬೌದ್ಧ ಧರ್ಮದ ಪ್ರಚಾರ

   C) ಟಿಬೆಟ್ ವಿವಾದ ಉಲ್ಬಣಗೊಂಡಿದ್ದು D) ಪಂಚಶೀಲ ತತ್ವಗಳ ಅಂಗೀಕಾರ

4. "ಮಾನವಕುಲ ತಾನೊಂದೇ ವಲಂ" ಎಂದವರು

   A) ಪ್ಲೇಟೋ B) ಆದಿಕವಿ ಪಂಪ C) ಅಂಬೇಡ್ಕರ್ D) ಗಾಂಧೀಜಿ

5. ಕೇಂದ್ರ ಸರ್ಕಾರವು 'ಸಮಾನ ವೇತನ ಕಾಯ್ದೆ'ಯನ್ನು ಜಾರಿಗೆ ತಂದ ವರ್ಷ

   A) 1955 B) 1976 C) 1986 D) 1989

6. ಭಾರತದಲ್ಲಿ ವ್ಯಾಪಾಕವಾಗಿ ಹಂಚಿಕೆಯಾಗಿರುವ ಅರಣ್ಯಗಳು

   A) ಮ್ಯಾಂಗ್ರೋವ್ ಅರಣ್ಯಗಳು B) ನಿತ್ಯಹರಿದ್ವರ್ಣದ ಅರಣ್ಯಗಳು

   C) ಎಲೆ ಉದುರಿಸುವ ಮಾನ್ಸೂನ್ ಅರಣ್ಯಗಳು D) ಪರ್ವತ ಅರಣ್ಯಗಳು

7. 20ನೇ ಶತಮಾನದಲ್ಲಿ ಸರ್ಕಾರಗಳು ಆರ್ಥಿಕ ಯೋಜನೆಗಳನ್ನು ಬಳಕೆಗೆ ತಂದ ಮುಖ್ಯ ಉದ್ದೇಶ

   A) ಶೀಘ್ರ ಆರ್ಥಿಕ ಅಭಿವೃದ್ಧಿ B) ಜನಸಂಖ್ಯಾ ನಿಯಂತ್ರಣ

   C) ಭ್ರಷ್ಟಾಚಾರ ನಿರ್ಮೂಲನೆ D) ಸಾವಯವ ಕೃಷಿಗೆ ಉತ್ತೇಜನ

8. ಈ ಖಾತೆಯ ಠೇವಣಿಗಳಿಗೆ ಬ್ಯಾಂಕುಗಳು ಬಡ್ಡಿಯನ್ನು ಕೊಡುವುದಿಲ್ಲ

   A) ನಿಶ್ಚಿತ ಠೇವಣಿ ಖಾತೆ B) ಆವರ್ತ ಠೇವಣಿ ಖಾತೆ C) ಉಳಿತಾಯ ಖಾತೆ D) ಚಾಲ್ತಿ ಖಾತೆ

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ: 8x1=8**

9. ಮಧ್ಯಕಾಲದಲ್ಲಿ ಏಷ್ಯಾ ದೇಶಗಳ ವ್ಯಾಪಾರದ ಮೇಲೆ ಏಕಸ್ವಾಮ್ಯ ಸಾಧಿಸಿದ್ದವರು ಯಾರು?
10. ರಾಮಕೃಷ್ಣ ಮಿಷನ್ ಅನ್ನು ಏಕೆ ಸ್ಥಾಪಿಸಲಾಯಿತು?
11. ಕರ್ನಾಟಕದಲ್ಲಿ ಭ್ರಷ್ಟಾಚಾರ ನಿಯಂತ್ರಣಕ್ಕಾಗಿ ಸ್ಥಾಪಿಸಿದ ಸಂಸ್ಥೆ ಯಾವುದು?
12. ಶ್ರಮ ವಿಭಜನೆ ಎಂದರೇನು?
13. ಭಾರತದಲ್ಲಿ ಅತಿ ಕಡಿಮೆ ಮಳೆ ಪಡೆಯುವ ಪ್ರದೇಶ ಯಾವುದು?
14. ಹಿರಾಕುಡ್ ಯೋಜನೆಯನ್ನು ಯಾವ ನದಿಗೆ ನಿರ್ಮಿಸಲಾಗಿದೆ?
15. ಡಾ. ಎಂ.ಎಸ್.ಸ್ವಾಮಿನಾಥನ್ ರವರನ್ನು ಭಾರತದ ಹಸಿರು ಕ್ರಾಂತಿ ಪಿತಾಮಹ ಎಂದು ಕರೆಯುತ್ತಾರೆ. ಏಕೆ?
16. ಭಾರತದ ರಿಸರ್ವ್ ಬ್ಯಾಂಕನ್ನು 'ಬ್ಯಾಂಕುಗಳ ಬ್ಯಾಂಕು' ಎಂದು ಏಕೆ ಕರೆಯುತ್ತಾರೆ?

## III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ: 8x2=16

**17.** ಮಾಂಟೆಗೋ–ಚೆಮ್ಸ್ ಫರ್ಡ್ ಸುಧಾರಣಾ ಕಾಯ್ದೆಯ ಪ್ರಮುಖಾಂಶಗಳು ಯಾವುವು?

**18.** 4ನೇ ಆಂಗ್ಲೋ–ಮೈಸೂರು ಯುದ್ಧದ ಪರಿಣಾಮಗಳು ವಿವರಿಸಿ.

**19.** ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಉದ್ವಿಘ್ನತೆಗೆ ಕಾರಣವಾದ ವಿಷಯಗಳು ಯಾವುವು? ಅಥವಾ

ಭಾರತ ಮತ್ತು ರಷ್ಯಾ ಸಂಬಂಧವನ್ನು ವಿವರಿಸಿ

**20.** ನಿರುದ್ಯೋಗಕ್ಕೆ ಕಾರಣಗಳೇನು? ಅಥವಾ ಅಸಂಘಟಿತ ದುಡಿಮೆಗಾರರು ಅನೇಕ ಸಮಸ್ಯೆಗಳಿಗೆ ಒಳಗಾಗುತ್ತಿದ್ದಾರೆ. ಏಕೆ?

**21.** ಭಾರತದ ಕರಾವಳಿ ತೀರಗಳನ್ನು ಹೆಸರಿಸಿ.

**22.** ಭಾರತದ ವ್ಯವಸಾಯವು 'ಮಾನ್ಸೂನ್ ಮಾರುತಗಳೊಡನೆ ಆಡುವ ಜೂಜಾಟವಾಗಿದೆ.' ಚರ್ಚಿಸಿರಿ.

**23.** ಕೃಷಿ ವಲಯವು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರಗಳೇನು?

**24.** ಉಳಿತಾಯ ಖಾತೆಯು ಚಾಲ್ತಿ ಖಾತೆಗಿಂತ ಭಿನ್ನವಾಗಿದೆ. ಹೇಗೆ?

## IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿರಿ: 9x3=27

**25.** ಪ್ಲಾಸಿ ಕದನಕ್ಕೆ ಕಾರಣ ಮತ್ತು ಪರಿಣಾಮಗಳನ್ನು ವಿವರಿಸಿ. ಅಥವಾ

ಚಿಕ್ಕ ದೇವರಾಜ ಒಡೆಯರ್ ರವರ ಸಾಧನೆಗಳನ್ನು ವಿವರಿಸಿ.

**26.** ಸಹಾಯಕ ಸೈನ್ಯ ಪದ್ಧತಿಯು ದೇಶೀಯ ದೊರೆಗಳನ್ನು ಬ್ರಿಟಿಷರ ನಿಯಂತ್ರಣಕ್ಕೆ ಒಳಪಡಿಸಿತು. ಹೇಗೆ?

**27.** ಸಂಗೊಳ್ಳಿ ರಾಯಣ್ಣನು ಸ್ವಾತಂತ್ರ್ಯ ಹೋರಾಟದಲ್ಲಿ ಹೋರಾಡಿದ ಕ್ರಮವನ್ನು ವಿವರಿಸಿ.

**28.** "ಮಹಿಳೆಯರ ಸ್ಥಾನಮಾನ ಉತ್ತಮಪಡಿಸಲು ಸರ್ಕಾರ ಬದ್ಧವಾಗಿದೆ." ಸಮರ್ಥಿಸಿ.

**29.** ಅಸ್ಪೃಶ್ಯತೆ ನಿವಾರಣೆಗೆ ನಮ್ಮ ಸರ್ಕಾರವು ಕೈಗೊಂಡಿರುವ ಕ್ರಮಗಳನ್ನು ವಿವರಿಸಿ.

**30.** ಪೂರ್ವಘಟ್ಟ ಮತ್ತು ಪಶ್ಚಿಮ ಘಟ್ಟಗಳಿಗಿರುವ ವ್ಯತ್ಯಾಸಗಳನ್ನು ತಿಳಿಸಿ.

**31.** ಮಣ್ಣಿನ ಸವೆತವನ್ನು ತಡೆಗಟ್ಟಬಹುದಾದ ಕ್ರಮಗಳೇನು? ಅಥವಾ ಅರಣ್ಯಗಳನ್ನು ಹೇಗೆ ಸಂರಕ್ಷಿಸಬಹುದು?

**32.** ಪಂಚವಾರ್ಷಿಕ ಯೋಜನೆಗಳ ಉದ್ದೇಶಗಳನ್ನು ತಿಳಿಸಿ. ಅಥವಾ

ಪಂಚವಾರ್ಷಿಕ ಯೋಜನೆಗಳ ಸಾಧನೆಗಳನ್ನು ವಿವರಿಸಿ.

**33.** ಬ್ಯಾಂಕ್ ಖಾತೆಯನ್ನು ಹೊಂದುವುದರಿಂದ ಆಗುವ ಪ್ರಯೋಜನಗಳೇನು? ಅಥವಾ

ಅಂಚೆ ಕಚೇರಿಗಳು ಕೈಗೊಳ್ಳುವ ಹಣಕಾಸಿನ ಕಾರ್ಯಗಳನ್ನು ವಿವರಿಸಿ.

## V. ಈ ಕೆಳಗಿನ ಪ್ರಶ್ನೆಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ: 4x4=16

**34.** ಜಮೀನ್ದಾರಿ ಪದ್ಧತಿಗಿಂತ ರೈತವಾರಿ ಪದ್ಧತಿಯು ಭಿನ್ನ. ಹೇಗೆ?

**35.** ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಸಾಧನೆಗಳನ್ನು ವಿವರಿಸಿ ಅಥವಾ

ರಾಜಾ ರಾಮಮೋಹನ್ ರಾಯರನ್ನು 'ಭಾರತೀಯ ನವೋದಯದ ಜನಕ' ಎಂದು ಕರೆಯಲು ಕಾರಣವೇನು?

**36.** ಕೋಮುವಾದದಿಂದ ಉಂಟಾಗುವ ದುಷ್ಪರಿಣಾಮಗಳನ್ನು ವಿವರಿಸಿ.

**37.** ಭಾರತ ಸರ್ಕಾರವು ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳನ್ನು ಏಕೆ ಕೈಗೊಳ್ಳುತ್ತದೆ?

## VI. ೩೮. ಭಾರತದದ ನಕ್ಷೆ ಬರೆದು, ಈ ಕೆಳಗಿನವುಗಳನ್ನು ಗುರುತಿಸಿ. 1+4=5

a) ಕರ್ಕಾಟಕ ಸಂಕ್ರಾಂತಿ ವೃತ್ತ b) ಕೋರಮಂಡಲ ತೀರ

c) ಕೋಸಿ ನದಿ d) ಪಂಪಸಾಗರ

***********************